# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮ ಕಾರ್ಯಾಲಯ, ಕಾವೇರಿ ಭವನ, ಬೆಂಗಳೂರು - 560 009.

ಕವಿಪ್ರನಿನಿ/ ಐಇ/2013/07-08
ಲಗತ್ತು: ಪತ್ರದಲ್ಲಿರುವಂತೆ.

**ನೆನಪೋಲೆ-1**
11 JAN 2017

ಎಲ್ಲಾ ಮುಖ್ಯ ಇಂಜಿನಿಯರ್ (ವಿ),
ಪ್ರಸರಣ ವಲಯ,
ಕವಿಪ್ರನಿನಿ,
ಬೆಂಗಳೂರು/ ಮೈಸೂರು/ ತುಮಕೂರು/ ಹಾಸನ / ಬಾಗಲಕೋಟೆ / ಕಲಬುರಗಿ.

ಮಾನ್ಯರೇ,

ವಿಷಯ:- ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ 1996 ರಡಿಯಲ್ಲಿ ನಿಗಮದ ಕಾಮಗಾರಿಗಳಿಗೆ ಪಾವತಿಸಿರುವ ಸುಂಕದ ವಿವರ ಸಲ್ಲಿಸುವ ಬಗ್ಗೆ.

ಉಲ್ಲೇಖ:-
1. ಕವಿಪ್ರನಿನಿ/ ಐಇ/2013/07-08 ದಿನಾಂಕ 25/06/2007.
2. ಕವಿಪ್ರನಿನಿ/ ಐಇ/2013/07-08 ದಿನಾಂಕ 08/01/2015.
3. ಕವಿಪ್ರನಿನಿ/ ಐಇ/2013/07-08 ದಿನಾಂಕ 27/05/2016.
4. ಕಾರ್ಮಿಕ ಆಯುಕ್ತರು ರವರ ಪತ್ರ ಸಂಖ್ಯೆ ಸಿ ಡಬ್ಲ್ಯೂ ಬಿ/ ಸೆಸ್/ ಸಿಆರ್-01/ 16-17 ದಿನಾಂಕ 27/07/2016.
5. ಕವಿಪ್ರನಿನಿ/ ಐಇ/2013/07-08 ದಿನಾಂಕ 31/08/2016.
6. ಕಾರ್ಮಿಕ ಆಯುಕ್ತರು ರವರ ಪತ್ರ ಸಂಖ್ಯೆ ಸಿ ಡಬ್ಲ್ಯೂ ಬಿ/ ಸೆಸ್/ ಸಿಆರ್-01/ 16-17 ದಿನಾಂಕ 29/12/2016.

| | |
|---|---|
| EE (IT) | |
| EE (MIS) | |
| DCA (IT) | |
| SEE (IT&MIS) | |

AEE-4/AE-1

* * * * * * * * * * * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ನಿಗಮದ ಆದೇಶಗಳಂತೆ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ ಹಾಗೂ ಅದರಡಿಯ ನಿಯಮಗಳನ್ವಯ, ನಿಗಮ ಕೈಗೊಳ್ಳುವ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳ ವೆಚ್ಚದ ಶೇಕಡಾ 1 ರಷ್ಟು ಹಣವನ್ನು ಗುತ್ತಿಗೆದಾರರ ಹುಂಡಿಗಳಲ್ಲಿ ಮುರಿದು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಪಾವತಿಸಬೇಕಾಗಿರುತ್ತದೆ. ಕಾರ್ಮಿಕ ಆಯುಕ್ತರು ಉಲ್ಲೇಖ (4) ಮತ್ತು (6) ರಲ್ಲಿನ ಪತ್ರಗಳಲ್ಲಿ, ಕವಿಪ್ರನಿನಿಯ ಕಾರ್ಯ ವ್ಯಾಪ್ತಿಯಲ್ಲಿ, ದಿನಾಂಕ 18/07/2007 ರಿಂದ, ವಲಯ ವ್ಯಾಪ್ತಿಯಲ್ಲಿ ಕೈಗೊಂಡ ಎಲ್ಲಾ ನಿರ್ಮಾಣ ಕಾಮಗಾರಿಗಳ ವೆಚ್ಚದ ಮೇಲೆ, ಕಡಿತಗೊಳಿಸಲಾದ ಸುಂಕದ ವಿವರಗಳನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ತ್ವರಿತವಾಗಿ Soft copy ಯನ್ನು (labour.commissioner42@gmail.com) ಹಾಗೂ (karbuildworkswelfare@gmail.com)

ಗೆ ಮತ್ತು Hard copy ಯನ್ನು ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಐಟಿಐ ಆವರಣ, ಡೈರಿ ಸರ್ಕಲ್ ಹತ್ತಿರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು- 560 029 ರವರಿಗೆ ಕಳುಹಿಸಲು ಕೋರಿರುತ್ತಾರೆ.

ಕಾರ್ಮಿಕ ಆಯುಕ್ತರ ದಿನಾಂಕ 29/12/2016 ರ ಪತ್ರ ಹಾಗೂ ಅದರೊಂದಿಗಿನ ಅಡಕಗಳನ್ನು ಈ ಪತ್ರದೊಂದಿಗೆ ಮಾಹಿತಿಗಾಗಿ ಲಗತ್ತಿಸಲಾಗಿದೆ. ಈ ಸಂಬಂಧ, ಕಾರ್ಮಿಕ ಆಯುಕ್ತರು ಕೋರಿರುವ ತಮ್ಮ ವಲಯ ವ್ಯಾಪ್ತಿಯಲ್ಲಿನ ವಿವರಗಳನ್ನು ಕ್ರೋಢಿಕರಿಸಿ, ಸದರಿ ವಿವರಗಳನ್ನು ನಿಗಧಿತ ನಮೂನೆಯಲ್ಲಿ ಕಳುಹಿಸುವಂತೆ ಮತ್ತೊಮ್ಮೆ ಕೋರಲು ನಿರ್ದೇಶಿತಳಾಗಿದ್ದೇನೆ.

ನಿಮ್ಮ ವಿಶ್ವಾಸಿ,

ಉಪ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ, ಬೆಂಗಳೂರು.

**ಪ್ರತಿಗಳು:-**

1. ಆರ್ಥಿಕ ಸಲಹೆಗಾರರು (ಎ ಮತ್ತು ಆರ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
2. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ ವೃತ್ತ, ಕವಿಪ್ರನಿನಿ.
3. ಎಲ್ಲಾ ನಿಯಂತ್ರಣಾಧಿಕಾರಿಗಳು, ಪ್ರಸರಣ ವಲಯ, ಕವಿಪ್ರನಿನಿ.
4. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ ಮತ್ತು ಎಂಐಎಸ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು- ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು ಕೋರಿದೆ.
5. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಬೃಹತ್ ಕಾಮಗಾರಿ/ ಟಿಎಲ್ ಮತ್ತು ಎಸ್‌ಎಸ್ ವಿಭಾಗ, ಕವಿಪ್ರನಿನಿ.
6. ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಪ್ರಸರಣ ವೃತ್ತ, ಕವಿಪ್ರನಿನಿ.
7. ಎಲ್ಲಾ ಲೆಕ್ಕಾಧಿಕಾರಿಗಳು, ಬೃಹತ್ ಕಾಮಗಾರಿ/ ಟಿಎಲ್ ಮತ್ತು ಎಸ್‌ಎಸ್ ವಿಭಾಗ, ಕವಿಪ್ರನಿನಿ.
8. ವ್ಯವಸ್ಥಾಪಕರು (ಆಂತರಿಕ ನಿರ್ವಹಣೆ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು - ಕಾವೇರಿ ಭವನ ಕಟ್ಟಡ ಸಂಕೀರ್ಣದ ಕಾಮಗಾರಿಗಳ ಬಗ್ಗೆ ಸುಂಕ ಪಾವತಿಸಿರುವ ವಿವರಗಳನ್ನು ನಿಗಧಿತ ನಮೂನೆಯಲ್ಲಿ ಒದಗಿಸಲು ಕೋರಿದೆ.

ಕಾರ್ಮಿಕ ಆಯುಕ್ತರು
**R.R. JANNU I.A.S**
Commissioner of Labour

ಡೈರಿ ಸರ್ಕಲ್ ಹತ್ತಿರ, ಬನ್ನೇರುಘಟ್ಟ ರಸ್ತೆ
ಬೆಂಗಳೂರು - ೫೬೦೦೨೯
"Karmika Bhavan" I.T.I Compound
Near Dairy Circle, Bannerughatta Road
Bangalore - 560029

422

M. D.
4 - JAN 2017
KPTCL

ಅಸಪ. ಸಂ: ಸಿಡಬ್ಲ್ಯೂಬಿ/ಸೆಸ್/ಸಿ.ಆರ್-01/2016-17

ದಿನಾಂಕ: 24-12-2016.

ಮಾನ್ಯರೇ, ಜಾಹೀರ್ ಅ ಕ್ತರ್ ರವರಿಗೆ

**ವಿಷಯ:** ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಯ ಯೋಜನಾ ನಕ್ಷೆಗಳಿಗೆ ನೀಡಿರುವ ಪರವಾನಗಿ ಮತ್ತು ಸುಂಕ ವಸೂಲಾತಿ ವಿವರಗಳನ್ನು ನೀಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರಿ ಆದೇಶ ಸಂಖ್ಯೆ: ಎಲ್‌ಡಿ 300 ಎಲ್‌ಇಟಿ 2006, ದಿನಾಂಕ: 18-01-2007.
2. ಮಂಡಳಿಯ ಪತ್ರ ಸಂಖ್ಯೆ: ಕ.ಕಾ.ಮಂ./ಆಡಿಟ್/ಸುಂಕ/ಆರ್‌ಟಿಜಿ.../2014, ದಿನಾಂಕ: 07-01-2014.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಆದೇಶನದನ್ವಯ ಮುಖ್ಯ ಕಾಯ್ದೆ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ, 1998ರ ಅಡಿಯಲ್ಲಿ ಕಲಂ 2(d) ಹಾಗೂ ಕಲಂ 3(3)ರ ಸುಂಕ ಕಾಯ್ದೆ, 1996ರ ಪ್ರಕಾರ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳ ಪೂರ್ಣ ವೆಚ್ಚದ ಶೇ. 1ರಷ್ಟು ಸುಂಕದ ಮೊತ್ತವನ್ನು ಕಟ್ಟಡ ಮಾಲೀಕರು/ಡೆವಲಪರ್ಸ್/ ಗುತ್ತಿಗೆದಾರರುಗಳಿಂದ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಪಾವತಿಸಬೇಕಾಗುತ್ತದೆ.

ಹಾಗೂ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ, 1996ರ ಅಡಿಯಲ್ಲಿ ಕಲಂ 3(2)ರ ಪ್ರಕಾರ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳ ಯೋಜನಾ ನಕ್ಷೆ ಮಂಜೂರಾತಿ ಪ್ರಾಧಿಕಾರಿಗಳು, ಸ್ಥಳೀಯ ಸಂಸ್ಥೆಗಳು ಕಟ್ಟಡ ಪರವಾನಗಿಯನ್ನು ನೀಡುವಾಗಲೇ ಮಾಲೀಕರು/ಡೆವಲಪರ್ಸ್/ ಗುತ್ತಿಗೆದಾರರು ಸಲ್ಲಿಸಿರುವ ನಿರ್ಮಾಣದ ಅಂದಾಜು ವೆಚ್ಚದಲ್ಲಿ ಶೆ.1ರಷ್ಟು ಸುಂಕವನ್ನು ಸಂಗ್ರಹಿಸಿ, ಸಂಗ್ರಹಿಸಿದ ಸುಂಕದ ಮೊತ್ತವನ್ನು ಕಲಂ 3(3)ರ ಸುಂಕ ಕಾಯ್ದೆ, 1996ರ ಪ್ರಕಾರ 30 ದಿನಗಳೊಳಗಾಗಿ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು ಇವರಿಗೆ ಕ್ರಾಸ್ಡ್ ಚೆಕ್/ಡಿಡಿ ಮುಖಾಂತರ ಜಮಾ ಮಾಡಬೇಕಾಗುತ್ತದೆ.

ಉಲ್ಲೇಖ 2ರಲ್ಲಿನ ಪ್ರಕಾರ ಸಂಗ್ರಹಿಸಿದ ಸುಂಕದ ಹಣ ಖಜಾನೆ ಚೆಕ್/ಡಿಡಿಗಳನ್ನು ಮಂಡಳಿಯ ಉಳಿತಾಯ ಖಾತೆಗೆ ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮುಖಾಂತರ ಜಮಾ ಮಾಡುವಂತೆ ಈಗಾಗಲೇ ಸೂಚಿಸಲಾಗಿದೆ (ಪ್ರತಿ ಲಗತ್ತಿಸಿದೆ). ಆದರೆ, ಕಟ್ಟಡ ಕಾಮಗಾರಿಗೆ ಅನುಗುಣವಾಗಿ ಸುಂಕ ಸಂಗ್ರಹಣೆಯಾಗದಿರುವ ಬಗ್ಗೆ ಮಹಾಲೇಖಪಾಲರ ಕಛೇರಿಯಿಂದ ಆದ ಲೆಕ್ಕ ಪರಿಶೋಧನೆಯ ಸಂದರ್ಭದಲ್ಲಿ ಆಕ್ಷೇಪಿಸಿರುವ ಅಂಶದಿಂದ ಕಂಡುಬಂದಿರುತ್ತದೆ.

ಕಛೇರಿ : ೦೮೦-೨೬೫೩೧೨೫೨ ಫ್ಯಾಕ್ಸ್ : ೦೮೦-೨೬೫೩೧೨೫೪, ಇ-ಮೇಲ್ : labourcommissioner42@gmail.com, ವೆಬ್‌ಸೈಟ್ : http//labour.kar.nic.in
Office : 080 - 26531252 Fax : 080 - 26531254 Email : labourcommissioner 42@gmail.com, Web : http//labour.kar.nic.in

ರಾಜ್ಯದಲ್ಲಿ ಸುಂಕವು ಕ್ರಮಬದ್ಧವಾಗಿ ಸಂಗ್ರಹವಾಗದಿರುವ ಬಗ್ಗೆ ಮಾನ್ಯ ಕಾರ್ಮಿಕರ ಸಚಿವರು ತೆಗೆದುಕೊಂಡ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಚರ್ಚೆಯಾಗಿದ್ದು, ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳ ಯೋಜನಾ ನಕ್ಷೆ ಮಂಜೂರಾತಿ ಪ್ರಾಧಿಕಾರಿಗಳು ದಿನಾಂಕ:18-01-2007 ರಿಂದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳ ನಿರ್ಮಾಣಕ್ಕಾಗಿ ಪರವಾನಗಿ ನೀಡಿರುವ, ಕಾರ್ಮಿಕ ಕಲ್ಯಾಣ ಸುಂಕವನ್ನು ಸಂಗ್ರಹಿಸಿರುವ ವಿವರಗಳು ಈಗಾಗಲೇ ಮಂಡಳಿಗೆ ಪಾವತಿಯಾಗಿರುವ ಸುಂಕದ ವಿವರದೊಂದಿಗೆ ತಾಳೆಮಾಡಿ, ಸುಂಕ ಪಾವತಿಸದೇ ಇರುವ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳ ಮಾಲೀಕರು/ಡೆವಲಪರ್ಸ್/ಗುತ್ತಿಗೆದಾರರುಗಳಿಂದ ಸುಂಕವನ್ನು ವಸೂಲಾತಿ ಮಾಡಲು ಹಾಗೂ ಕಾಯ್ದೆಯನ್ವಯ ಕಾರ್ಮಿಕ ಅಧಿಕಾರಿಗಳು ನಿಗದಿತ ಅವಧಿಯಲ್ಲಿ ಸುಂಕ ನಿರ್ಧರಣೆ ಮಾಡಲು ಅನುವುವಾಗುವಂತೆ ನಿಮ್ಮ ಕಾರ್ಯ ವ್ಯಾಪ್ತಿಯ ಸಂಪೂರ್ಣ ಮಾಹಿತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಭರ್ತಿಮಾಡಿ ತ್ವರಿತವಾಗಿ ಸಾಫ್ಟ್ ಕಾಪಿಯನ್ನು (karbuildworkerswelfare@gmail.com)ಗೆ ಅಂತೆಯೇ ಹಾರ್ಡ್ ಕಾಪಿಯನ್ನು ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಐ.ಟಿ.ಐ. ಆವರಣ, ಡೈರಿ ಸರ್ಕಲ್ ಹತ್ತಿರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29 ಇಲ್ಲಿಗೆ ನೀಡಲು ನಿಮ್ಮ ಆದೇಶಕ್ಕೆ ಒಳಪಡುವ ಸಕ್ಷಮ ಅಧಿಕಾರಿಗಳಿಗೆ ಸೂಕ್ತವಾದ ನಿರ್ದೇಶನವನ್ನು ನೀಡಬೇಕೆಂದು ಈ ಮೂಲಕ ತಮ್ಮನ್ನು ಕೋರಲಾಗಿದೆ.

ವಂದನೆಗಳೊಂದಿಗೆ,

ತಮ್ಮ ನಂಬುಗೆಯ,

ರವರಿಗೆ,

ಶ್ರೀ ಜಾವೇದ್ ಅಖ್ತರ್, IAS.,
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ವಿದ್ಯುತ್ ಪ್ರಸರಣ
ನಿಗಮ ನಿಯಮಿತ,
ಕಾವೇರಿ ಭವನ ಕೆ.ಜಿ. ರಸ್ತೆ,
ಮೊದಲ ಮಹಡಿ, ಬೆಂಗಳೂರು-560001.

ಕರ್ನಾಟಕ ಸರ್ಕಾರ

**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು.**

ಸಂಖ್ಯೆ:ಕಕಾಮಂ/ಎಓ/ಸುಂಕ/ಆರ್‌ಟಿಜಿಎಸ್/2015-16

ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಕಛೇರಿ,
ಕೌಶಲ್ಯ ಭವನ, ಬನ್ನೇರುಘಟ್ಟ ರಸ್ತೆ,
ಬೆಂಗಳೂರು-560029.
ದಿನಾಂಕ: 05-06-2015.

**ಸುತ್ತೋಲೆ**

ವಿಷಯ: ಸಂಗ್ರಹಿಸಿದ ಸುಂಕದ ಹಣ/ಚೆಕ್/ಖಜಾನೆ ಚೆಕ್/ ಡಿಡಿಗಳನ್ನು ಮಂಡಳಿಯ SB ಖಾತೆಗೆ NEFT/RTGS ಮೂಲಕ ಜಮಾ ಮಾಡುವ ಬಗ್ಗೆ.

ಉಲ್ಲೇಖ:
1. ಸರ್ಕಾರಿ ಆದೇಶ ಸಂಖ್ಯೆ ಎಲ್‌ಡಿ 300 ಎಲ್‌ಇಟಿ 2006 ದಿನಾಂಕ: 18-01-2007.
2. ಸರ್ಕಾರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಗ್ರಾಅಪ 116 ಗ್ರಾನೀಸ(2)12, ದಿನಾಂಕ: 21-10-2013.
3. ಮಂಡಳಿಯ ಪತ್ರ ಸಂಖ್ಯೆ: ಕಕಾಮಂ/ಎಓ/ಸುಂಕ/ಸೆಸ್/ ಆರ್‌ಟಿಜಿಎಸ್/2011-12, ದಿನಾಂಕ: 13-09-2012.
4. ಮಂಡಳಿಯ ಪತ್ರ ಸಂಖ್ಯೆ: ಕಕಾಮಂ/ಎಓ/ಸುಂಕ/ಸೆಸ್/ ಆರ್‌ಟಿಜಿಎಸ್/2013-14, ದಿನಾಂಕ: 07-01-2014.

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ 1996ರ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ, ಹಾಗೂ 1998ರ ನಿಯಮಾವಳಿಯ ನಿಯಮ 4ರ ಉಪನಿಯಮ 4ರ ಅನ್ವಯ ಮತ್ತು ಉಲ್ಲೇಖ 1ರ ಸರ್ಕಾರಿ ಆದೇಶ ಸಂಖ್ಯೆ ಮತ್ತು ಉಲ್ಲೇಖ 3 ಮತ್ತು 4 ರಲ್ಲಿನ ಪತ್ರಗಳಲ್ಲಿ ಕಾಮಗಾರಿ ಬಿಲ್ಲುಗಳಿಂದ ಸಂಗ್ರಹಿಸಿದ ಸೆಸ್ ಮೊತ್ತದ ಚೆಕ್/ಡಿಡಿ/ಖಜಾನೆ ಚೆಕ್‌ಗಳನ್ನು NEFT/RTGS ಮೂಲಕ ಮಂಡಳಿಯ ಬ್ಯಾಂಕ್ ಖಾತೆಗೆ ಪಾವತಿಸುವಂತೆ ತಿಳಿಸಲಾಗಿತ್ತು. ಅದರಂತೆ NEFT/RTGS ಮೂಲಕ ಜಮಾ ಮಾಡಲು ಸುತ್ತೋಲೆಯನ್ನು ಸಿದ್ಧಪಡಿಸಿ ಕಳುಹಿಸಲಾಗಿತ್ತು. ಆದರೆ ಕೆಲವೊಂದು ಕಡೆ ಇದುವರೆಗೂ ಸುತ್ತೋಲೆಯ ಪ್ರಕಾರ ಆರ್‌ಟಿಜಿಎಸ್/ಎನ್‌ಇಎಫ್‌ಟಿ ಮಾಡದೇ ಚೆಕ್/ಡಿಡಿಗಳನ್ನು ಕಳುಹಿಸಿಕೊಡುತ್ತಿರುವುದು ಕಂಡುಬಂದಿರುತ್ತದೆ. ಆದ್ದರಿಂದ ಸಂಗ್ರಹಿಸಿದ ಸುಂಕದ ಮೊತ್ತವನ್ನು ಮಂಡಳಿ ಖಾತೆಗೆ ನೇರವಾಗಿ ಜಮಾ ಮಾಡುವ ಬಗ್ಗೆ ಅಗತ್ಯವಿರುವ ಎಲ್ಲಾ ಮಾಹಿತಿಯನ್ನು ಪುನ: ಈ ಕೆಳಗೆ ನೀಡಲಾಗಿದೆ. ಮಂಡಳಿಗೆ ಪಾವತಿಸಬೇಕಾದ ಸುಂಕದ ಮೊತ್ತವನ್ನು ಮಂಡಳಿಯ ಖಾತೆಗೆ ಆರ್‌ಟಿಜಿಎಸ್/ಎನ್‌ಇಎಫ್‌ಟಿ ಮೂಲಕ ಜಮಾಮಾಡುವುದು. ಆರ್‌ಟಿಜಿಎಸ್/ಎನ್‌ಇಎಫ್‌ಟಿ ಜಮಾ ಮಾಡಿದ ಬಗ್ಗೆ ಲಿಖಿತ ಮಾಹಿತಿಯನ್ನು ತಕ್ಷಣ ಮಂಡಳಿಗೆ ತಪ್ಪದೆ ಕಳುಹಿಸಲು ಕೋರಿದೆ.

**NEFT/RTGS ಮೂಲಕ ಸುಂಕ (ಸೆಸ್)ದ ಮೊತ್ತವನ್ನು ಪಾವತಿಸಲು ಅವಶ್ಯವಾದ ಬ್ಯಾಂಕ್ ಖಾತೆಯ ಮಾಹಿತಿಗಳು.**

| | | |
|---|---|---|
| 1 | ಖಾತೆದಾರರ ಹೆಸರು ಮತ್ತು ವಿಳಾಸ | **Karnataka Building & Other Construction Workers welfare Board. 'Koushalya Bhavan' Bannerugatta Road, Bengaluru-560029.<br>Ph: 080-26644312/26644313 Fax: 080-22453646<br>Email:karbuildingbenefits@gmail.com** |

| | | |
|---|---|---|
| 2 | ಖಾತೆದಾರರ ಬ್ಯಾಂಕಿನ ಹೆಸರು | **Canara Bank, Hombegowda Nagar Branch, 11th Cross, Wilson Garden, Bengaluru-560027.** |
| 3 | ಬ್ಯಾಂಕ್ ಉಳಿತಾಯ (SB) ಖಾತೆಯ ಸಂಖ್ಯೆ | **1371101079786** |
| 4 | ಬ್ಯಾಂಕ್ IFSC ಕೋಡ್ ಸಂಖ್ಯೆ | **CNRB0001371** |
| 5 | ಪಾನ್(PAN) ಸಂಖ್ಯೆ | **AAALK-0820C** |

ಕಾರ್ಮಿಕ ಆಯುಕ್ತರು ಹಾಗೂ
ಮುಖ್ಯಕಾರ್ಯನಿರ್ವಹಣಾಧಿಕಾರಿ.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.**

1. ಎಲ್ಲಾ ಜಿಲ್ಲಾಧಿಕಾರಿಗಳು.
2. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
3. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಅಧೀನ ಕಛೇರಿಗಳು.
4. ಆಯುಕ್ತರು, ಮಹಾನಗರ ಪಾಲಿಕೆ ಮಂಗಳೂರು/ಹುಬ್ಬಳ್ಳಿ-ಧಾರವಾಡ/ ಬೆಳಗಾವಿ/ಗುಲಬರ್ಗಾ/ ಮೈಸೂರು.
5. ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಹಣಾಧಿಕಾರಿಗಳು.
6. ಎಲ್ಲಾ ನಗರಸಭೆ/ಪುರಸಭೆಗಳ ಮುಖ್ಯಾಧಿಕಾರಿಗಳು.
7. ಎಲ್ಲಾ ಪಟ್ಟಣ ಪಂಚಾಯತಿಗಳ ಮುಖ್ಯಾಧಿಕಾರಿಗಳು.
8. ಎಲ್ಲಾ ಇಲಾಖೆಗಳ ಕಾರ್ಯನಿರ್ವಾಹಕ ಅಭಿಯಂತರು/ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು.
9. ಕರ್ನಾಟಕ ವಿದ್ಯುತ್‌ಚ್ಛಕ್ತಿ ನಿಗಮದ ಎಲ್ಲಾ ಶಾಖೆಗಳಿಗೆ ಹಾಗೂ ಅನುಷ್ಠಾನ ಅಧಿಕಾರಿಗಳಿಗೆ.
10. ಎಲ್ಲಾ ರಾಜ್ಯ/ಕೇಂದ್ರ ಸ್ಥಳೀಯ ಸಂಸ್ಥೆಗಳು/ಮಂಡಳಿಗಳು.
11. ಎಲ್ಲಾ ಜಿಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಿಗಳು.
12. ಎಲ್ಲಾ ಗ್ರಾಮ ಪಂಚಾಯಿತಿ ವಿಸ್ತರ್ಣಾಧಿಕಾರಿಗಳು.
13. ಕೇಂದ್ರ ಸರ್ಕಾರದ ಲೋಕೋಪಯೋಗಿ ಇಲಾಖೆ/ಕಛೇರಿಗಳು/ಭಾರತ ಸಂಚಾರ ನಿಗಮ ಹಾಗೂ ಇತರೆ ಸಂಬಂಧಪಟ್ಟ ಇಲಾಖೆಗಳು.

# ನಮೂನೆ

## ದಿನಾಂಕ: 18–07–2007 ರಿಂದ ವಲಯ ಕಛೇರಿ ವ್ಯಾಪ್ತಿಯಲ್ಲಿನ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳ ವಿವರಗಳು

| ಕ್ರ ಸಂ. | ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಯ ಹೆಸರು ಮತ್ತು ವಿಳಾಸ | ಮಾಲೀಕರ ಹೆಸರು ಮತ್ತು ವಿಳಾಸ | ಕಾಮಗಾರಿಯ ಸ್ವರೂಪ | ಕಾಮಗಾರಿಯ ನಕ್ಷೆಯನ್ನು ಅನುಮೋದಿಸಿದ ಪ್ರಾಧಿಕಾರ ಮತ್ತು ದಿನಾಂಕ | ಕಾಮಗಾರಿಯ ಪರವಾನಿಗೆ ಸಂಖ್ಯೆ | ಕಾಮಗಾರಿಯ ಅಂದಾಜು ವೆಚ್ಚ (ರೂ.ಗಳಲ್ಲಿ) | ಪರವಾನಿಗೆಯ ಅವಧಿ | ಕಾಮಗಾರಿಯ ಒಟ್ಟು ವೆಚ್ಚದ ಶೇ.1ರಷ್ಟು ಸುಂಕವನ್ನು ಪಾವತಿಸಿದ ಡಿ.ಡಿ/ಚೆಕ್ ಸಂಖ್ಯೆ ಹಾಗೂ ದಿನಾಂಕ | ಕಾಮಗಾರಿಯು ಪ್ರಾರಂಭವಾದ ದಿನಾಂಕ | ಕಾಮಗಾರಿಯ ಪ್ರಸಕ್ತ ಸ್ಥಿತಿ | ಕಾಮಗಾರಿಯು ಮುಕ್ತಾಯ ದಿನಾಂಕ | ಷರಾ |
|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| | | | | | | | | | | | | |

ಸ್ಥಳ:
ದಿನಾಂಕ:

ಸಕ್ಷಮ ಪ್ರಾಧಿಕಾರಿಯ
ಮೊಹರು ಮತ್ತು ಸಹಿ.

IInd Floor
computter.